# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರಸಮಾಧಾನ ಯೋಜನೆ, 2010ರ ಬಗ್ಗೆ.

ಉಲ್ಲೇಖ: 2010–11ರ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ:323

\- - -

**ಪ್ರಸ್ತಾವನೆ:**

2010–11ರ ವರ್ಷದ ತಮ್ಮ ಆಯವ್ಯಯ ಭಾಷಣದಲ್ಲಿ, ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳು 1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ ಮತ್ತು 1956ರ ಕೇಂದ್ರ ಮಾರಾಟ ತೆರಿಗೆ ಕಾಯ್ದೆಗಳಡಿಯಲ್ಲಿ ಇರುವ ತೆರಿಗೆ ಮತ್ತಿತರ ಬಾಕಿಯನ್ನು ಕಡಿಮೆಗೊಳಿಸುವ ಉದ್ದೇಶದಿಂದ ಕರಸಮಾಧಾನ ಯೋಜನೆಯೊಂದನ್ನು ಘೋಷಿಸಿರುತ್ತಾರೆ. ಅದರಂತೆ, ಸರ್ಕಾರವು ಕೆಳಕಂಡ ಆದೇಶವನ್ನು ಹೊರಡಿಸಿದೆ.

## ಸರ್ಕಾರಿ ಆದೇಶ ಸಂ: ಆಇ 109 ಸಿಎಸ್ಎಲ್ 2010, ದಿನಾಂಕ: 01.06.2010.

'ಕರಸಮಾಧಾನ ಯೋಜನೆ–2010' ಎಂಬ ಯೋಜನೆಗೆ ಸರ್ಕಾರ ಈ ಮೂಲಕ ಅಂಗೀಕಾರ ನೀಡಿದೆ. ಈ ಯೋಜನೆಯು ಕರ್ನಾಟಕ ಮಾರಾಟ ತೆರಿಗೆ ಮತ್ತು ಕೇಂದ್ರ ಮಾರಾಟ ತೆರಿಗೆ ಕಾಯ್ದೆಗಳಡಿಯಲ್ಲಿ ದಿನಾಂಕ:31.3.2005ರವರೆಗಿನ ಎಲ್ಲಾ ಕರನಿರ್ಧರಣಾ ಅವಧಿಗಳಿಗೆ ಸಂಬಂಧಿಸಿದಂತೆ ಯಾವುದೇ ಕರದಾತರ (ವ್ಯಾಪಾರಿಯ / ಡೀಲರ್‌ನ) ಪಾವತಿಸಲು ಬಾಕಿಯಿರುವ ದಂಡ ಮತ್ತು ಬಡ್ಡಿಗಳನ್ನು ಕೆಲವು ನಿಬಂಧನೆ ಮತ್ತು ವಿಧಾನಗಳಿಗೊಳಪಟ್ಟು ಭಾಗಶ: ಮನ್ನಾ ಮಾಡುತ್ತದೆ. ಈ ಯೋಜನೆಯ ವಿವರಗಳು, ನಿಬಂಧನೆಗಳು ಮತ್ತು ವಿಧಾನಗಳು ಕೆಳಗೆ ಹೇಳಿದಂತಿವೆ:

### 1. ಪರಿಭಾಷೆಗಳು:

ಈ ಯೋಜನೆಯ ಉದ್ದೇಶಗಳಿಗೋಸ್ಕರ,

1.1. 'ತೆರಿಗೆ ಬಾಕಿ' ಎಂದರೆ ದಿನಾಂಕ:31.3.2005ರವರೆಗಿನ ಎಲ್ಲ ಕರನಿರ್ಧರಣಾ ಅವಧಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಮಾರಾಟ ತೆರಿಗೆ ಮತ್ತು ಕೇಂದ್ರ ಮಾರಾಟ ತೆರಿಗೆ ಕಾಯಿದೆಗಳಡಿಯಲ್ಲಿ ನಿರ್ಧರಿಸಲ್ಪಟ್ಟ / ಪುನರ್‌ನಿರ್ಧರಿಸಲ್ಪಟ್ಟ (ನಿರ್ಧರಿಸಲಾಗಿದೆಯೆಂದು ಭಾವಿಸಲ್ಪಟ್ಟ ನಿರ್ಧರಣೆಗಳನ್ನೂ ಒಳಗೊಂಡಂತೆ) ದಿನಾಂಕ:5.3.2010ರಂದು ಪಾವತಿಯಾಗದೇ ಬಾಕಿ ಇರುವ ತೆರಿಗೆಯ ಮೊತ್ತ.

1.2. 'ದಂಡ ಮತ್ತು ಬಡ್ಡಿ ಬಾಕಿ' ಎಂದರೆ ಕರ್ನಾಟಕ ಮಾರಾಟ ತೆರಿಗೆ ಮತ್ತು ಕೇಂದ್ರ ಮಾರಾಟ ತೆರಿಗೆ ಕಾಯಿದೆಗಳ ವಿವಿಧ ಪ್ರಕರಣಗಳಡಿಯಲ್ಲಿ 31.3.2005ರವರೆಗಿನ ಅವಧಿಗಳಿಗೆ ಸಂಬಂಧಿಸಿದಂತೆ

ವಿಧಿಸಲಾಗಿರುವ ಹಾಗೂ ಬೆಳೆದಿರುವ ಮತ್ತು ದಿನಾಂಕ:5.3.2010ರಂದು ಪಾವತಿಯಾಗದೇ ಬಾಕಿ ಉಳಿದಿರುವ ದಂಡ ಮತ್ತು ಬಡ್ಡಿಯ ಮೊತ್ತ. ಇದು ಈ ಮೇಲೆ ಹೇಳಿದ ಕರನಿರ್ಧರಣಾ ಅವಧಿಗಳಿಗೆ ಸಂಬಂಧಿಸಿದಂತೆ, ಈ ಯೋಜನೆಯಡಿಯಲ್ಲಿ ಕರದಾತರು ಅರ್ಜಿಯನ್ನು ಸಲ್ಲಿಸುವ ದಿನಾಂಕದವರೆಗೆ ವಿಧಿಸಬಹುದಾದ ಎಲ್ಲಾ ಬಗೆಯ ದಂಡಗಳು ಹಾಗೂ ಅಲ್ಲಿಯವರೆಗೆ ಬೆಳೆಯುವ ಬಡ್ಡಿಯ ಮೊತ್ತಗಳನ್ನು ಒಳಗೊಂಡಿರುತ್ತದೆ.

## 2. ಯೋಜನೆ:

2.1. 31.8.2010ರಂದು ಅಥವಾ ಆ ದಿನಾಂಕಕ್ಕಿಂತ ಮೊದಲು ತೆರಿಗೆ ಬಾಕಿಯನ್ನು ಪೂರ್ಣವಾಗಿ ಪಾವತಿ ಮಾಡುವ ಯಾವುದೇ ಕರದಾತರಿಗೆ (ವ್ಯಾಪಾರಿಗೆ / ಡೀಲರ್‌ಗೆ) ದಂಡ ಮತ್ತು ಬಡ್ಡಿ ಬಾಕಿಯನ್ನು ಭಾಗಶಃ ಮನ್ನಾ ಮಾಡಲಾಗುತ್ತದೆ.

2.2. ಉಪಖಂಡ 2.1ರಲ್ಲಿ ಹೇಳಿರುವ ಭಾಗಶಃ ಮನ್ನಾ ಮಾಡಲಾಗುವ ಮೊತ್ತವು ದಂಡ ಮತ್ತು ಬಡ್ಡಿ ಬಾಕಿಯ ಒಟ್ಟು ಮೊತ್ತದ ಶೇ.90ರಷ್ಟಿರುತ್ತದೆ. ಅಂದರೆ ಅಂತಹ ಕರದಾತರು ತೆರಿಗೆ ಬಾಕಿಯನ್ನು ಪಾವತಿಸುವುದಲ್ಲದೇ ಒಟ್ಟು ದಂಡ ಮತ್ತು ಬಡ್ಡಿ ಬಾಕಿ ಮೊತ್ತದ ಶೇ.10ರಷ್ಟನ್ನು 31.8.2010ರಂದು ಅಥವಾ ಆ ದಿನಾಂಕಕ್ಕಿಂತ ಮೊದಲು ಪಾವತಿಸಬೇಕು. ಅವನು ಹಾಗೆ ಮಾಡಿದಲ್ಲಿ, ಉಳಿದ ದಂಡ ಮತ್ತು ಬಡ್ಡಿ ಮೊತ್ತವನ್ನು ಮನ್ನಾ ಮಾಡಲಾಗುತ್ತದೆ.

2.3. ಯಾವುದೇ ಕರದಾತರು ತೆರಿಗೆಯನ್ನು ಬಾಕಿ ಇಟ್ಟುಕೊಳ್ಳದೆ, ದಂಡ ಮತ್ತು ಬಡ್ಡಿಯನ್ನು ಮಾತ್ರ ಬಾಕಿ ಉಳಿಸಿಕೊಂಡಿದ್ದರೆ, ಅಂತಹ ಕರದಾತರು ದಂಡ ಮತ್ತು ಬಡ್ಡಿ ಬಾಕಿಯ ಒಟ್ಟು ಮೊತ್ತದ ಶೇ.10ರಷ್ಟನ್ನು 31.8.2010ರಂದು ಅಥವಾ ಆ ದಿನಾಂಕಕ್ಕಿಂತ ಮೊದಲು ಪಾವತಿ ಮಾಡಿದಲ್ಲಿ, ಉಳಿದ ದಂಡ ಮತ್ತು ಬಡ್ಡಿ ಮೊತ್ತವನ್ನು ಮನ್ನಾ ಮಾಡಲಾಗುತ್ತದೆ.

2.4. ತೆರಿಗೆ ಬಾಕಿ ಹಾಗೂ ದಂಡ ಮತ್ತು ಬಡ್ಡಿ ಬಾಕಿಗೆ ಸಂಬಂಧಿಸಿದ ಆದೇಶ ಅಥವಾ ನಡವಳಿಗಳ ವಿರುದ್ಧ ಯಾವುದೇ ಮನವಿ ಪ್ರಾಧಿಕಾರ ಅಥವಾ ನ್ಯಾಯಾಲಯಕ್ಕೆ ಕರದಾತರು ಮೇಲ್ಮನವಿ ಅಥವಾ ಇತರೆ ಅರ್ಜಿಗಳನ್ನು ಸಲ್ಲಿಸಿದ್ದು, ಅಂತಹ ಅರ್ಜಿಗಳು ವಿಲೇವಾರಿಯಾಗದೇ ಬಾಕಿ ಉಳಿದಿದ್ದಲ್ಲಿ ಅಂತಹ ಕರದಾತರು ಈ ಯೋಜನೆಯಡಿಯಲ್ಲಿ ದಂಡ ಮತ್ತು ಬಡ್ಡಿ ಬಾಕಿಯ ಮನ್ನಾ ಸೌಲಭ್ಯವನ್ನು ಪಡೆಯುವ ಮೊದಲು ಅಂತಹ ಮೇಲ್ಮನವಿ ಅಥವಾ ಇತರೇ ಅರ್ಜಿಗಳನ್ನು ಹಿಂಪಡೆಯಬೇಕು. ಈ ರೀತಿ ಹಿಂಪಡೆದಲ್ಲಿ, ಯಾವ ಆದೇಶದ ಅಥವಾ ನಡವಳಿಗಳ ವಿರುದ್ಧ ಸಲ್ಲಿಸಿದ್ದ ಮೇಲ್ಮನವಿ ಅಥವಾ ಇತರೆ ಅರ್ಜಿಯನ್ನು ಹಿಂಪಡೆಯಲಾಗಿದೆಯೋ ಅಂತಹ ಆದೇಶದ ಅಥವಾ ನಡವಳಿಗಳ

ಅನುಸಾರ ನಿರ್ಧರಿಸಲ್ಪಟ್ಟಿರುವ ತೆರಿಗೆಯ ಬಾಕಿ ಹಾಗೂ ದಂಡ ಮತ್ತು ಬಡ್ಡಿ ಬಾಕಿಗಳ ಮೊತ್ತವನ್ನು ಕರಸಮಾಧಾನ ಯೋಜನೆ-2010ರ ಸೌಲಭ್ಯಗಳನ್ನು ಪಡೆದುಕೊಳ್ಳಲು 'ಬಾಕಿ' ಎಂದು ಪರಿಗಣಿಸಲಾಗುತ್ತದೆ.

2.5. ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಜಿ ಸಲ್ಲಿಸಿದ ನಂತರ ಅಂತಹ ಕರದಾತರು ಮೇಲ್ಮನವಿ ಅಥವಾ ಇತರೆ ಅರ್ಜಿಗಳನ್ನು ಯಾವುದೇ ಮನವಿ ಪ್ರಾಧಿಕಾರ ಅಥವಾ ನ್ಯಾಯಾಲಯದ ಮುಂದೆ ಸಲ್ಲಿಸತಕ್ಕದ್ದಲ್ಲ.

2.6. ತೆರಿಗೆ ಬಾಕಿ ಹಾಗೂ ದಂಡ ಮತ್ತು ಬಡ್ಡಿ ಬಾಕಿಗೆ ಕಾರಣವಾದ ಆದೇಶಕ್ಕೆ ಸಂಬಂಧಿಸಿದಂತೆ ಯಾವುದೇ ಕರದಾತರ ಪ್ರಕರಣದಲ್ಲಿ

(ಅ) ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ ಮುಂದೆ ರಾಜ್ಯವು ಮನವಿ ಸಲ್ಲಿಸಿದ್ದಲ್ಲಿ; ಅಥವಾ

(ಆ) ಮಾನ್ಯ ಉಚ್ಛ ನ್ಯಾಯಾಲಯ ಹಾಗೂ ಸರ್ವೋಚ್ಛ ನ್ಯಾಯಾಲಯದ ಮುಂದೆ ರಾಜ್ಯವು ಮೇಲ್ಮನವಿ ಅಥವಾ ಪರಿಷ್ಕರಣೆ ಅರ್ಜಿ ಅಥವಾ ಯಾವುದೇ ಬಗೆಯ ಅರ್ಜಿಯನ್ನು ಸಲ್ಲಿಸಿದ್ದಲ್ಲಿ; ಅಥವಾ

(ಇ) ದಿನಾಂಕ:5.3.2010ರಂದು ಇರುವಂತೆ, ವಾಣಿಜ್ಯ ತೆರಿಗೆ ಇಲಾಖೆಯ ಯಾವುದೇ ಅಧಿಕಾರಿಯು ಸ್ವಯಂಪರಿಷ್ಕರಣಾ ನಡವಳಿ ಅಥವಾ ಮರುಕರನಿರ್ಧರಣಾ ನಡವಳಿಗಳನ್ನು ಪ್ರಾರಂಭಿಸಿದ್ದಲ್ಲಿ,

ಅಂತಹ ಕರದಾತರು ಈ ಯೋಜನೆಯ ಸೌಲಭ್ಯವನ್ನು ಪಡೆಯಲು ಅರ್ಹರಲ್ಲ.

## 3. ಕಾರ್ಯವಿಧಾನ:

3.1. ಈ ಯೋಜನೆಯ ಸೌಲಭ್ಯವನ್ನು ಪಡೆಯಲು ಇಚ್ಛಿಸುವ ಕರದಾತರು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1ರ ನಮೂನೆಯಲ್ಲಿ ಸಂಬಂಧಿತ ಕರನಿರ್ಧರಣಾಧಿಕಾರಿ / ವಸೂಲಿ ಅಧಿಕಾರಿಗೆ 31.7.2010ರಂದು ಅಥವಾ ಆ ದಿನಾಂಕಕ್ಕೂ ಮೊದಲು ಕರ್ನಾಟಕ ಮಾರಾಟ ತೆರಿಗೆ ಕಾಯಿದೆ ಮತ್ತು ಕೇಂದ್ರ ಮಾರಾಟ ತೆರಿಗೆ ಕಾಯಿದೆ ಅಡಿಯಲ್ಲಿ ಪ್ರತಿ ಕರನಿರ್ಧರಣಾ ವರ್ಷಕ್ಕೂ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

3.2. ಸಂಬಂಧಿತ ಕರನಿರ್ಧರಣಾಧಿಕಾರಿ / ವಸೂಲಿ ಅಧಿಕಾರಿಯು ಅರ್ಜಿಗಳನ್ನು ಪರಿಶೀಲಿಸಿ, ಅರ್ಜಿ ಸಲ್ಲಿಸುವ ದಿನಾಂಕದವರೆಗೆ ಕರದಾತರು ವಾಸ್ತವವಾಗಿ ಪಾವತಿಸಬೇಕಾದ ತೆರಿಗೆಯ ಬಾಕಿ ಹಾಗೂ

ದಂಡ ಮತ್ತು ಬಡ್ಡಿಗಳ ಬಾಕಿಯ ಮೊತ್ತಗಳನ್ನು ಲೆಕ್ಕ ಹಾಕತಕ್ಕದ್ದು. ಒಂದು ವೇಳೆ, ಕರದಾತರು ಅರ್ಜಿಯನ್ನು ಸಲ್ಲಿಸಿದ ದಿನಾಂಕದವರೆಗೆ ಪಾವತಿಸಬೇಕಾಗಿದೆಯೆಂದು ಘೋಷಿಸಿಕೊಂಡ ತೆರಿಗೆ ಬಾಕಿ ಹಾಗೂ ದಂಡ ಮತ್ತು ಬಡ್ಡಿ ಬಾಕಿಯ ಮೊತ್ತದಲ್ಲಿ ಯಾವುದೇ ತಪ್ಪುಗಳು ಕಂಡು ಬಂದಲ್ಲಿ, ಸಂಬಂಧಿತ ಕರನಿರ್ಧರಣಾಧಿಕಾರಿ / ವಸೂಲಿ ಅಧಿಕಾರಿಯು, ಇಂತಹ ತಪ್ಪುಗಳ ಬಗೆಗೆ ಅರ್ಜಿ ಸಲ್ಲಿಸಿದ 15 ದಿನಗಳೊಳಗೆ ಅವರಿಗೆ ತಿಳಿಸತಕ್ಕದ್ದು.

3.3. ಕರನಿರ್ಧರಣಾಧಿಕಾರಿ / ವಸೂಲಿ ಅಧಿಕಾರಿಯವರಿಂದ ಈ ರೀತಿ ಮಾಹಿತಿ ಸ್ವೀಕರಿಸಿದ ನಂತರ ಅಂತಹ ಕರದಾತರು ಸ್ವಇಚ್ಛೆಯ ಮೇರೆಗೆ ಈ ಯೋಜನೆಯ ಸೌಲಭ್ಯವನ್ನು ಪಡೆಯುವ ಸಲುವಾಗಿ ಉಪಖಂಡ 2.1 ರಂತೆ ತೆರಿಗೆ ಬಾಕಿ ಹಾಗೂ ಉಪಖಂಡ 2.2 ಮತ್ತು 2.3 ರಂತೆ ದಂಡ ಮತ್ತು ಬಡ್ಡಿ ಬಾಕಿಯ ವ್ಯತ್ಯಾಸದ ಮೊತ್ತವನ್ನು ಪಾವತಿಸಬಹುದು. ಈ ಎಲ್ಲಾ ಪಾವತಿಗಳನ್ನು 31.8.2010ರಂದು ಅಥವಾ ಆ ದಿನಾಂಕಕ್ಕೂ ಮೊದಲು ಮಾಡತಕ್ಕದ್ದು. ಹಾಗೆ ಪಾವತಿ ಮಾಡುವ ಮೊದಲು ಕರದಾತರು ದಂಡ ಮತ್ತು ಬಡ್ಡಿ ಬಾಕಿಯ ಮನ್ನಾ ಮಾಡಲು ಕೋರುವ ಅರ್ಜಿಯ ಜೊತೆಗೆ ಅನುಬಂಧ–2ರಂತೆ ತಾನು ಮನವಿ ಅಥವಾ ಇತರೆ ಅರ್ಜಿಯನ್ನು ಹಿಂಪಡೆದಿರುವುದಕ್ಕೆ ಪೂರಕವಾಗಿ ಘೋಷಣಾ ಪತ್ರವೊಂದನ್ನು ಸಲ್ಲಿಸತಕ್ಕದ್ದು. ಅಂತಹ ಘೋಷಣಾ ಪತ್ರವನ್ನು ದಂಡ ಮತ್ತು ಬಡ್ಡಿ ಬಾಕಿಗೆ ಸಂಬಂಧಿಸಿದ ಪ್ರತಿಯೊಂದು ಕರನಿರ್ಧರಣಾ ವರ್ಷಕ್ಕೂ ಪ್ರತ್ಯೇಕವಾಗಿ ಕರ್ನಾಟಕ ಮಾರಾಟ ತೆರಿಗೆ ಮತ್ತು/ ಅಥವಾ ಕೇಂದ್ರ ಮಾರಾಟ ತೆರಿಗೆ ಕಾಯ್ದೆಗಳಡಿಯಲ್ಲಿ ಸಲ್ಲಿಸತಕ್ಕದ್ದು.

3.4. ಕರದಾತರು ಹಾಗೆ ಮಾಡಲು ವಿಫಲರಾದಲ್ಲಿ, ಕರನಿರ್ಧರಣಾಧಿಕಾರಿ / ವಸೂಲಿ ಅಧಿಕಾರಿಯು ಅರ್ಜಿಯನ್ನು ತಿರಸ್ಕರಿಸುವ ತತ್ಸಂಬಂಧ ವಿವರವಾದ ಆದೇಶವೊಂದನ್ನು ಹೊರಡಿಸತಕ್ಕದ್ದು.

3.5. ಅರ್ಜಿ ಸಲ್ಲಿಸಿದ ಕರದಾತರು ಈ ಯೋಜನೆಯ ಸೌಲಭ್ಯಕ್ಕೆ ಅರ್ಹರೆಂಬುದನ್ನು ಖಚಿತಪಡಿಸಿಕೊಂಡ ನಂತರ ಕರನಿರ್ಧರಣಾಧಿಕಾರಿ / ವಸೂಲಿ ಅಧಿಕಾರಿಯು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ–3ರ ಪ್ರಕಾರ ಉಳಿದ ದಂಡ ಮತ್ತು ಬಡ್ಡಿ ಮೊತ್ತವನ್ನು ಮನ್ನಾ ಮಾಡಿ, ಕರ್ನಾಟಕ ಮಾರಾಟ ತೆರಿಗೆ ಮತ್ತು /ಅಥವಾ ಕೇಂದ್ರ ಮಾರಾಟ ತೆರಿಗೆ ಕಾಯ್ದೆ ಅಡಿಯಲ್ಲಿ ಪ್ರತಿಯೊಂದು ಕರನಿರ್ಧರಣಾ ವರ್ಷಕ್ಕೂ ಪ್ರತ್ಯೇಕವಾಗಿ ಆದೇಶವನ್ನು ಹೊರಡಿಸತಕ್ಕದ್ದು.

3.6. ಖಂಡ 3.3ರಲ್ಲಿ ನಿರ್ದಿಷ್ಟಪಡಿಸಿದಂತೆ ಪಾವತಿ ಮಾಡಿದ ದಿನಾಂಕದಿಂದ 30 ದಿನಗಳೊಳಗೆ ಮನ್ನಾ ಮಾಡಿದ ಆದೇಶವನ್ನು ಹೊರಡಿಸತಕ್ಕದ್ದು.

3.7. ಮನ್ನಾ ಆದೇಶವನ್ನು ಹೊರಡಿಸಿದ 10 ದಿನಗಳೊಳಗೆ ಅದನ್ನು ಸಂಬಂಧಿತ ಕರದಾತರ ಮೇಲೆ ಜಾರಿ ಮಾಡತಕ್ಕದ್ದು.

3.8. ಕರನಿರ್ಧರಣಾಧಿಕಾರಿ / ವಸೂಲಿ ಅಧಿಕಾರಿಯು ಸರಿಯಾದ ದಂಡ ಮತ್ತು ಬಡ್ಡಿ ಬಾಕಿ ಮೊತ್ತವನ್ನು ಲೆಕ್ಕ ಹಾಕುವುದರಲ್ಲಿ ಕರದಾತರಿಗೆ ಸಹಾಯ ಮಾಡತಕ್ಕದ್ದು.

**4. ತೊಂದರೆಗಳ ನಿವಾರಣೆ:**

ಈ ಯೋಜನೆಯ ಜಾರಿಯಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ ಅಂತಹ ತೊಂದರೆಯನ್ನು ನಿವಾರಿಸಲು ಅವಶ್ಯಕ ಅಥವಾ ಯುಕ್ತವಾದ ನಿರ್ದೇಶನಗಳನ್ನು ವಾಣಿಜ್ಯ ತೆರಿಗೆಗಳ ಆಯುಕ್ತರು ನೀಡಬಹುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
1/6/10
(ಡಿ.ಆರ್.ಶಶಿಧರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ, (ವಾ.ತೆ-1).

ಪ್ರತಿಗಳನ್ನು ಇವರಿಗೆ ಕಳುಹಿಸಲಾಗಿದೆ:

(1) ವಾಣಿಜ್ಯ ತೆರಿಗೆಗಳ ಆಯುಕ್ತರು, ಗಾಂಧಿನಗರ, ಬೆಂಗಳೂರು-9.
(2) ಮಹಾಲೇಖಪಾಲರು (ಅಕೌಂಟ್ಸ್)/(ಆಡಿಟ್), ಕರ್ನಾಟಕ, ಬೆಂಗಳೂರು.
(3) ಕಾರ್ಯದರ್ಶಿ, ಕರ್ನಾಟಕ ವಿಧಾನಸಭಾ ಸಚಿವಾಲಯ, ಬೆಂಗಳೂರು.
(4) ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವಾಲಯ, ಬೆಂಗಳೂರು.
(5) ಉಪ ಕಾರ್ಯದರ್ಶಿ, ಸಚಿವ ಸಂಪುಟ – ಪ್ರಕರಣದ ಸಂಖ್ಯೆ C 231/2010 ಸಂಬಂಧಿಸಿದಂತೆ.
(6) ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ, ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ದಿನಾಂಕ: 01.06.2010 ಪ್ರಕಟಿಸಲು ಮತ್ತು 100 ಪ್ರತಿಗಳನ್ನು ಆರ್ಥಿಕ ಇಲಾಖೆ (ವಾ.ತೆ-1) ಇಲ್ಲಿಗೂ ಮತ್ತು 1000 ಪ್ರತಿಗಳನ್ನು ವಾಣಿಜ್ಯ ತೆರಿಗೆಗಳ ಆಯುಕ್ತರು, ಗಾಂಧಿನಗರ, ಬೆಂಗಳೂರು ಇವರಿಗೆ ಸರಬರಾಜು ಮಾಡಲು.

## ಅನುಬಂಧ –1

(ಸರ್ಕಾರದ ಆದೇಶ ಸಂಖ್ಯೆ: ಆಇ 109 ಸಿಎಸ್‌ಎಲ್ 2010, ದಿನಾಂಕ: 01.06.2010)

### ಕರಸಮಾಧಾನ ಯೋಜನೆ – 2010ರಡಿಯಲ್ಲಿ ದಂಡ ಮತ್ತು ಬಡ್ಡಿ ಬಾಕಿಯ ಮನ್ನಾ ಕೋರಿಕೆ ಅರ್ಜಿ

(1) ಕರದಾತರ ಹೆಸರು ಮತ್ತು ವಿಳಾಸ :

(2) ನೋಂದಾಯಿತರಾಗಿರುವ ಕಛೇರಿಯ ಹೆಸರು :

(3) ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯಡಿಯ ನೋಂದಣಿ ಸಂಖ್ಯೆ :

(4) (ಅ) ಕರನಿರ್ಧರಣಾ ವರ್ಷ :

(ಆ) ಕರನಿರ್ಧರಣಾ / ಮರುಕರನಿರ್ಧರಣಾ ಆದೇಶದ ದಿನಾಂಕ :

(ಇ) ದಂಡದ ಆದೇಶದ ದಿನಾಂಕ: :

(5) (ಅ) (i) ದಿ:5.3.2010ರಂದು ಇರುವ ತೆರಿಗೆ ಬಾಕಿ : ರೂ.

(ii) ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಿರುವಂತೆ ತೆರಿಗೆ ಬಾಕಿ ಮೊತ್ತವನ್ನು ಪಾವತಿ ಮಾಡಿರುವ ವಿವರಗಳು :

(ಆ) ಅರ್ಜಿ ಸಲ್ಲಿಸುವ ದಿನಾಂಕದವರೆಗೆ ಇರುವ ದಂಡದ ಬಾಕಿ ಮೊತ್ತ (ವಿಧಿಸಬಹುದಾದ ದಂಡವನ್ನೂ ಒಳಗೊಂಡಂತೆ) : ರೂ.

(ಇ) (i) ಅರ್ಜಿ ಸಲ್ಲಿಸುವ ದಿನಾಂಕದವರೆಗೆ ಇರುವ ಬಡ್ಡಿಯ ಬಾಕಿ ಮೊತ್ತ :

(ii)ಸರ್ಕಾರಿ ಆದೇಶದಲ್ಲಿ ನಿಗದಿ ಮಾಡಿರುವಂತೆ ದಂಡ ಮತ್ತು ಬಡ್ಡಿಯ ಪಾವತಿ ವಿವರಗಳು :

(6) ಮನವಿ ಅಥವಾ ಇತರೆ ಅರ್ಜಿಗಳನ್ನು ಹಿಂಪಡೆದ ದಿನಾಂಕ :

### ಘೋಷಣೆ

________________ಆದ ನಾನು ಮೇಲಿನ ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ನನ್ನ ತಿಳಿವಳಿಕೆ ಮತ್ತು ನಂಬಿಕೆಯ ಮೇರೆಗೆ ಸತ್ಯ ಮತ್ತು ಪೂರ್ಣವಾಗಿದೆಯೆಂದು ಪ್ರಮಾಣಪೂರ್ವಕವಾಗಿ ಘೋಷಿಸುತ್ತೇನೆ.

ದಿನಾಂಕ:_______

ಸ್ಥಳ: _______

ಸಹಿ

ಸಹಿ ಮಾಡುವವರ ಹೆಸರು, ಸ್ಥಾನಮಾನ,
ಕರದಾತ ಸಂಸ್ಥೆಯ ಹೆಸರು, ಮತ್ತು ಪೂರ್ಣ ವಿಳಾಸ.

**ಸೂಚನೆ:** (1) ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ ಮತ್ತು ಕೇಂದ್ರ ಮಾರಾಟ ತೆರಿಗೆ ಕಾಯ್ದೆಗಳಡಿಯಲ್ಲಿ ಪ್ರತಿಯೊಂದು ಕರನಿರ್ಧರಣಾ ವರ್ಷಕ್ಕೆ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸಬೇಕು.

(2) ಸಂಬಂಧಿತ ಕರನಿರ್ಧರಣ ಆದೇಶ ಮತ್ತು ದಂಡದ ಆದೇಶದ ಪ್ರತಿಗಳನ್ನು ಹಾಗೂ ಮನವಿ ಅಥವಾ ಇತರೆ ಅರ್ಜಿಗಳನ್ನು ಹಿಂಪಡೆದಿರುವುದಕ್ಕೆ ಪುರಾವೆಯನ್ನು ಲಗತ್ತಿಸಬೇಕು.

(3) ಅನ್ವಯವಾಗದಿರುವುದನ್ನು ಹೊಡೆದು ಹಾಕಿ.

## ಅನುಬಂಧ –2

(ಸರ್ಕಾರದ ಆದೇಶ ಸಂಖ್ಯೆ: ಆಇ 109 ಸಿಐಸ್‌ಎಲ್ 2010, ದಿನಾಂಕ: 01.06.2010)

## ಘೋಷಣೆ

ಶ್ರೀ / ಶ್ರೀಮತಿ / ಕುಮಾರಿ ______________ ಆದ ನಾನು ಈ ಮೂಲಕ ಘೋಷಿಸುವುದೇನೆಂದರೆ, ನಾನು / ನಾವು 1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯಡಿಯಲ್ಲಿ, ____________ ನೋಂದಣಿ ಸಂಖ್ಯೆಯಂತೆ ________________________ ಕಛೇರಿಯಲ್ಲಿ ನೊಂದಾಯಿತನಾದ / ರಾದ ಕರದಾತರೆಂದು ಈ ಮೂಲಕ ಪ್ರಮಾಣಪೂರ್ವಕವಾಗಿ ಘೋಷಿಸುತ್ತೇನೆ/ವೆ. ನಾನು / ನಾವು ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ / ಕೇಂದ್ರ ಮಾರಾಟ ತೆರಿಗೆ ಕಾಯ್ದೆಗಳಡಿಯಲ್ಲಿ, _________ ವರ್ಷಕ್ಕೆ ಅಂತಿಮಗೊಳಿಸಲಾದ ಕರನಿರ್ಧರಣೆ ಅಥವಾ ಮರುಕರನಿರ್ಧರಣೆ ಅಥವಾ ಇತರೆ ನಡವಳಿಗಳ ವಿರುದ್ಧ ________________________________ ಪ್ರಾಧಿಕಾರದ ಮುಂದೆ ಸಲ್ಲಿಸಿದ್ದ (ಪ್ರಾಧಿಕಾರವನ್ನು ಹೆಸರಿಸಿ) ಮೇಲ್ಮನವಿ ಅಥವಾ ಇತರೆ ಅರ್ಜಿಯನ್ನು, ಕರ್ನಾಟಕ ಸರ್ಕಾರವು ದಿನಾಂಕ:_____________ರ ಆದೇಶ ಸಂ:____________________ಯಂತೆ ನೀಡಿರುವ ಕರಸಮಾಧಾನ ಯೋಜನೆ–2010ಯ ಸೌಲಭ್ಯವನ್ನು ಪಡೆದುಕೊಳ್ಳುವ ಸಲುವಾಗಿ, ದಿನಾಂಕ:________ ರಂದು ಹಿಂಪಡೆದಿರುತ್ತೇನೆ/ವೆ. ಮೇಲ್ಮನವಿ ಅಥವಾ ಇತರೆ ಅರ್ಜಿಯನ್ನು ಹಿಂಪಡೆದುದಕ್ಕೆ ಸಂಬಂಧಿಸಿದ ರುಜುವಾತು ದಾಖಲಾತಿಗಳನ್ನು ನಾನು/ ನಾವು ಲಗತ್ತಿಸುತ್ತೇನೆ/ವೆ.

ದಿನಾಂಕ: ಸಹಿ

ಸ್ಥಳ: ಸಹಿ ಮಾಡುವವರ ಹೆಸರು, ಸ್ಥಾನಮಾನ,

ವ್ಯಾಪಾರಿ ಸಂಸ್ಥೆಯ ಹೆಸರು, ಮತ್ತು ಪೂರ್ಣ ವಿಳಾಸ.

## ಅನುಬಂಧ –3

(ಸರ್ಕಾರದ ಆದೇಶ ಸಂಖ್ಯೆ: ಆಇ 109 ಸಿಎಸ್‌ಎಲ್ 2010, ದಿನಾಂಕ: 01.06.2010)

## ಮನ್ನಾ ಆದೇಶ

ಸಲ್ಲಿಸಿದ ಅರ್ಜಿ ಮತ್ತು ಘೋಷಣೆಗಳನ್ನು ಪರಿಶೀಲಿಸಲಾಗಿದೆ ಹಾಗೂ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ / ಕೇಂದ್ರ ಮಾರಾಟ ತೆರಿಗೆ ಕಾಯ್ದೆಯಡಿಯಲ್ಲಿ ______ ಕರನಿರ್ಧರಣಾ ವರ್ಷಕ್ಕೆ ಕರದಾತರು ದಿನಾಂಕ:______ರ ಸರ್ಕಾರಿ ಆದೇಶ ಸಂ:______________ಯ ನಿಬಂಧನೆಗಳಂತೆ ದಂಡ ಮತ್ತು ಬಡ್ಡಿ ಬಾಕಿಯ ಮನ್ನಾಗೆ ಅವರು ಅರ್ಹರಾಗಿರುತ್ತಾರೆಂದು ಕಂಡು ಬಂದಿದೆ. ಅದರಂತೆ, ಈ ಕೆಳಗಿನಂತೆ ಮನ್ನಾ ಮಾಡಿ ಆದೇಶಿಸಲಾಗಿದೆ.

ಮನ್ನಾ ಮಾಡಿದ ದಂಡ ಮತ್ತು ಬಡ್ಡಿಯ ಮೊತ್ತ: ರೂ._________

ವಿವರಗಳು ಈ ಕೆಳಗಿನಂತಿವೆ:

| | |
|---|---|
| ಕರದಾತರ ಹೆಸರು ಮತ್ತು ವಿಳಾಸ | |
| ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯಡಿ ನೋಂದಣಿ ಸಂಖ್ಯೆ | |
| ತೆರಿಗೆ ಬಾಕಿಯನ್ನು ಪೂರ್ಣವಾಗಿ ಪಾವತಿ ಮಾಡಿದ ದಿನಾಂಕ: | |
| ಪಾವತಿಸಬೇಕಾಗಿದ್ದ ದಂಡದ ಬಾಕಿಯ ಒಟ್ಟು ಮೊತ್ತ | ರೂ. |
| ಪಾವತಿಸಬೇಕಾಗಿದ್ದ ಬಡ್ಡಿ ಬಾಕಿಯ ಒಟ್ಟು ಮೊತ್ತ | ರೂ. |
| ಸರ್ಕಾರಿ ಆದೇಶದನ್ವಯ ಪಾವತಿ ಮಾಡಿದ ದಂಡ ಮತ್ತು ಬಡ್ಡಿಯ ಮೊತ್ತ – ಶೇಕಡಾ ವಿವರದೊಂದಿಗೆ (ಸರ್ಕಾರದ ಆದೇಶದ ಉಪಖಂಡ 2.2 / 2.3 ರಂತೆ) | ರೂ. |
| ಮನ್ನಾ ಮಾಡಲಾದ ದಂಡ ಮತ್ತು ಬಡ್ಡಿ ಬಾಕಿಯ ಮೊತ್ತ | ರೂ. |

ದಿನಾಂಕ: ಪ್ರಾಧಿಕಾರದ ಸಹಿ, ಹೆಸರು ಮತ್ತು ಪದನಾಮ

ಸ್ಥಳ :